**SPL.C. 5136/2024**
ಚಾ.ಸಾ **:2** ಪ್ರಾ.ಸಾ **:2**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಅರ್ತೆಮ್ಮ |
| ತಂದೆ ಹೆಸರು | : | ರಾಜಾ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಈ.ಜೆ.ಉದ್ಬಾಳ |

ಸಾಕ್ಷಿಗೆ ದಿನಾಂಕ **26-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**</u>

ನಾನು ಚಲುವಾದಿ ಜಾತಿಗೆ ಸೇರಿರುತ್ತೇನೆ. ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ಈ ಕೇಸಿನ ಎಲ್ಲಾ ಆರೋಪಿತರು ಕುರುಬ ಜನಾಂಗಕ್ಕೆ ಸೇರಿದ್ದಾರೆ.

2. ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 08-00 ರಿಂದ 08-30 ಗಂಟೆಗೆ ನನ್ನ ಗಂಡನಾದ ಚಾ.ಸಾ1 ಗೋಡ್ವಾನ ಹತ್ತಿರ ಹೋಗಿ ಬರುತ್ತೇನೆ ಎಂದು ಹೇಳಿದ್ದನು. ನನಗೆ ಸುಮಾರು ಬೆಳಿಗ್ಗೆ 09-00 ಗಂಟೆಗೆ ಚೀರಾಡುವ ಶಬ್ದ ಕೇಳಿ ಬಂದಿತ್ತು. ಕಾರಣ ನಾನು ಗೋಡ್ವಾನ್ ಹತ್ತಿರ ಹೋಗಿದ್ದೆನು.

3. ಆ ಸ್ಥಳಕ್ಕೆ ಹೋದಾಗ 15 ನೇ ಆರೋಪಿ ಕಲ್ಲಿನಿಂದ ಮತ್ತು 17 ನೇ ಆರೋಪಿ ಕಟ್ಟಿಗೆಯಿಂದ ನನ್ನಗಂಡನನ್ನು ಬಡಿಯುತ್ತಿದ್ದರು. ನಾನು ನನ್ನಗಂಡನನ್ನು ಬಿಡಿಸಲು ಹೋಗಿದ್ದೆನು.

4. ಆಗ 17 ನೇ ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿದ್ದಾರೆ. 15 ನೇ ಆರೋಪಿ ನನ್ನನ್ನು ಕಟ್ಟಿಗೆಯಿಂದ ಬಡಿದು ನೂಕಾಡಿದ್ದಾರೆ. 15 ಮತ್ತು 17 ನೇ ಆರೋಪಿತರು ನನ್ನನ್ನು ಬ್ಯಾಗಾರ ಸೂಳೆ ಎಂದು ಬೈದಿ ಜೀವ ಸಹಿತ ಉಳಿಸುವುದಿಲ್ಲ ಎಂದು ಹೇಳಿದ್ದಾರೆ.

5. ಆ ಸ್ಥಳಕ್ಕೆ ಚಾ.ಸಾ3 ರಿಂದ 5 ಇವರು ಬಂದಿದ್ದರು. ಈ ಕೇಸಿನ ಎಲ್ಲಾ ಆರೋಪಿತರು ಚಾ.ಸಾ3 ರಿಂದ 5 ಇವರನ್ನು ಬಡಿದಿರುತ್ತಾರೆ.

6. ಆನಂದ ಮತ್ತು ನಾಗೇಶ ಇವರು ಆ ಸ್ಥಳಕ್ಕೆ ಬಂದು ಜಗಳ ಬಿಡಿಸಿದ್ದಾರೆ.

7. ಜಗಳವಾದ ನಂತರ ನಾನು, ಚಾ.ಸಾ1, 3 ರಿಂದ 5 ಸೇರಿಕೊಂಡು ಪೊಲೀಸ್ ಠಾಣೆಗೆ ಹೋಗಿದ್ದೇವು. ಅಲ್ಲಿಂದ ಸಿಂಧನೂರಿನ ಸರಕಾರಿ ಆಸ್ಪತ್ರೆಗೆ ಹೋಗಿದ್ದೇವು. ನಾನು ಪೊಲೀಸರಿಗೆ

ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಮುದ್ದೇಮಾಲು 1 ರಿಂದ 4 ರಲ್ಲಿರುವ ವಸ್ತುಗಳಿಂದ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಗುರುತಿಸಿದ್ದಾರೆ.

<u>ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ಪರ ವಕೀಲರಿಂದ**:**</u>

ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಸಮಯ ಕೋರಿದ್ದಾರೆ. ಯಾವುದೇ ಸಕಾರಣ ಇಲ್ಲದೆ ಇರುವುದರಿಂದ ಅವರ ವಿನಂತಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ರಾಯಚೂರು ಪೀಠ ಸಿಂಧನೂರು